ಪಡೆದಿದ್ದೆ. ವಾಸ್ತವದಲ್ಲಿ ಆ ತಿಂಗಳು ಸ್ರಾವವೇ ಆಗಿರಲಿಲ್ಲ.

ಗಂಡನ ಮನೆಗೆ ಬಂದ ಎರಡನೆಯ ತಿಂಗಳಲ್ಲಿ ಗರ್ಭಪಾತವಾಗಿತ್ತು. ವಿಪರೀತ ರಕ್ತಸ್ರಾವವಾದಾಗ ಹೆದರಿದ ಇವರು ಸ್ತ್ರೀ ರೋಗ ತಜ್ಞರನ್ನು ಭೇಟಿ ಮಾಡಿಸಿದರು. 'ಮೂರು ತಿಂಗಳ ಗರ್ಭಿಣಿಯಾಗಿದ್ದು ಗರ್ಭಪಾತವಾಗಿದೆ. ಡಿ ಅಂಡ್ ಸಿ ಮಾಡಿಸಿಕೊಳ್ಳಬೇಕು' ಎಂದರು. ಅವಶ್ಯಕತೆಗಳನ್ನು ಪೂರೈಸಿ ಮನೆಗೆ ಕರೆ ತಂದವರು ಧುಮುಗುಡಹತ್ತಿದರು. ಅಂಗಾಲಿನಿಂದ ಬೆಂಕಿಯ ಉರಿ ಮೇಲೇರತೊಡಗಿದ್ದು ಮುಖದಲ್ಲಿ ಇಣುಕುತ್ತಿತ್ತು.

ಪತಿಯು 'ನೀನು ತವರಿನಲ್ಲಿದ್ದ ಒಂದು ತಿಂಗಳ ನಡುವೆ ಗರ್ಭ ಧರಿಸಿದ್ದೀ ಹೌದಲ್ಲ?' ಎಂದು ಕೇಳಿದರು.

ಇದೇನು ಒಡೆದು ಹೇಳುವ ಮಾತೇ? ಕಣ್ಣಂಚಿನ ತೇವದ ಜೊತೆಗೆ ಒಪ್ಪಾರೆ ತುಟಿ ಮೇಲೇರಿತೇ ಹೊರತು ಮಾತಾಡಲು ಹೋಗಲಿಲ್ಲ.

'ನೋಡು ಸ್ಪಷ್ಟವಾಗಿ ಹೇಳಿಬಿಡ್ತೇನೆ. ನನ್ನಿಂದ ಮಕ್ಕಳಾಗುವ ಸಾಧ್ಯತೆಗಳಿಲ್ಲ. ಇದನ್ನು ಮೊದಲೇ ನಿನಗೆ ತಿಳಿಸಬೇಕಾಗತ್ತು. ಆದರೆ ಸುರತದಲ್ಲಿ ಯಾವುದೇ ತೊಂದರೆ ಇಲ್ಲದ್ದರಿಂದ, ಕಾಲಕ್ರಮೇಣ ಸರಿಹೋದೀತೆಂಬ ಭರವಸೆಯಲ್ಲಿ ಹೇಳಿರಲಿಲ್ಲ. ನನ್ನದೂ ತಪ್ಪಾಗಿದೆ. ಇಂದಿಗೂ ಈ ಸ್ಥಿತಿಯೇ ಸುಧಾರಣೆ ಕಂಡಿಲ್ಲ.

ನನ್ನ ಮದುವೆ ಹಿಂದಿನ ಬದುಕನ್ನು ನಿನಗೆ ಹೇಳಿದ್ದೆ. ನಿನ್ನನ್ನು ಒಪ್ಪಿ ಮದುವೆಯಾಗಿರುವುದರಿಂದ ನನ್ನ ಅವಕಾಶ ನಿನಗೇ ಕೊನೆ. ಹಾಗಾಗಿ ನಿನ್ನ ಮದುವೆಗೆ ಮುಂಚಿನ ಚರಿತ್ರೆಯನ್ನು ನಾನೆಂದೂ ಕೆದುಕಹೋಗಿಲ್ಲ. ಇಷ್ಟು ದಿನ ನನ್ನ ಹೆಂಡತಿ ಅಂತ ಗರ್ವದಿಂದ ಹೇಳಿಕೊಳ್ಳುತ್ತಿದ್ದೆ, ಇನ್ಮುಂದೆ...?

ತೊಡೆಗಳಲ್ಲಿ ಮೂಡಿದ ನಿಶ್ಯಕ್ತಿಗೆ ಸೇರಿಕೊಂಡ ಚುಚ್ಚುಮಾತುಗಳಿಂದಾಗಿ ಕುದಿಯುತ್ತಿದ್ದವಳನ್ನು ಇನ್ನಷ್ಟು ಅದುಮಿಡುವವರಂತೆ ಚಾರಿತ್ರ್ಯವಿಲ್ಲದ ನಿನ್ನಿಂದಾಗಿ ನನಗೆ ಅವಮಾನವಾಗಿದೆ. ನಾನು ನಿನಗೆ ಇಷ್ಟವಾಗದಿದ್ದರೆ ಹೇಳಿ ಬಿಡು. ಹೀಗೆ ಜತೆಯಲ್ಲಿದ್ದುಕೊಂಡು ಕಳ್ಳಾಟವಾಡುವುದನ್ನು ಮಾತ್ರ ಸಹಿಸಲಾರೆ... ದಾಂಪತ್ಯ ಅನ್ನೋದೊಂದು ಮೌನ ಸಂಭ್ರಮ. ನಿನ್ನಂಥ ಬೀಚ್‌ಗೆ ಅದ್ಹೇಗೆ ಅರ್ಥವಾದೀತು...

ಇನ್ಮೇಲಾದ್ರೂ ನಿಷ್ಠೆಯಿಂದ ಹೊಂದಿ ಬಾಳ್ತೇನೆ ಅಂದ್ರೆ ಕ್ಷಮಿಸಲಡ್ಡಿಯಿಲ್ಲ. ಆದರೆ ನನ್ನ ಇನ್ನೊಂದು ಮುಖವನ್ನು ನೋಡಬೇಕಾಗುತ್ತೆ ಅಂದವರೆ ದಡಬಡ ನಡೆದು ಕೋಣೆ ಸೇರಿಕೊಂಡ.

ಯಾವಾಗ ಮಂದಿಯ ಬಾಯಿ ತೆವಲಿಗೆ ತುತ್ತಾದೆನೊ ಅಂದಿನಿಂದ ಇವರು ನನ್ನ ಅಸ್ತಿತ್ವವನ್ನು ನಿರ್ಲಕ್ಷಿಸಿ ತಾನಾಯ್ತು ತನ್ನ ಕೆಲಸವಾಯ್ತು ಎಂಬಂತೆ ಇರತೊಡಗಿದ್ದನ್ನು ಕತೆಯ ಪ್ರಾರಂಭದಲ್ಲೇ ನಿಮ್ಮ ಗಮನಕ್ಕೆ ತಂದಿದ್ದೆ.

ವಿವಶತೆಯಲ್ಲಿ ತನ್ನ ಧೋರಣೆಯನ್ನೇ ಬದಲಿಸಿಕೊಂಡ ಗಂಡನ ಅವಿನಾಭಾವ ದಿಂದಾಗಿ ನನ್ನಲ್ಲಿನ ಕಾಮವು ಇನ್ನಷ್ಟು ಹರಳುಗಟ್ಟಲು ಅಣಿಯಾಯಿತು. ಅನ್ಯತ್ರ ಕಾಮದ ಒಂದೆಳೆಯೂ ಇಣುಕದ ನನ್ನಲ್ಲಿ ಸದೃಢ ಪುರುಷಾಕಾರವೊಂದು ಎದುರಿಗಿದ್ದರೆ ಒಳಸುಳಿಗಳಲ್ಲಿ ಕಾಡುವ ಆಯ್ಕೆಗಳೇ ಬೇರೆಯಾಗಿ ನಿಲ್ಲುತ್ತಿದ್ದವು.

ಈ ದೈಹಿಕ ಕಾಮನೆಯೊಂದು ಅಮಲಿದ್ದಂತೆ. ಅದರ ಒತ್ತಡವನ್ನು ಯಾರಿಂದಲೂ ಅಳಿಯಲಾಗದು. ಮುಖ್ಯವಾಗಿ ಪ್ರೀತಿ – ಕಾಮನೆಗಳೆಂಬವು ನಾನು ಗಂಡನನ್ನು ಗಂಡ ನನ್ನನ್ನೂ ಅವಲಂಬಿಸಿದ ಒಂದು ಮನೋಶಾರೀರಿಕ ಕ್ರಿಯೆಯಲ್ಲವೇ? ಈ ಸಹಜ ಮತ್ತು ಅಸಹಜ ಲೈಂಗಿಕ ತೆವಲು ಒಬ್ಬರೊಳಗೂ ಇದ್ದು ವ್ಯಕ್ತಿ ನಿಯಂತ್ರಿತ ಕೌಶಲಕ್ಕೆ ತಕ್ಕ ಭಾವಪ್ರಾಪ್ತಿಯು ದಕ್ಕದಿದ್ದಾಗ ಆರೋಗ್ಯಕರ ಲೈಂಗಿಕ ಕ್ರಿಯೆಯೊಂದೇ ಸಾಲುವುದಿಲ್ಲ. ಹಾಗಾಗಿ ಇಷ್ಟೆಲ್ಲ ಕ್ಲೀಷೆ ನನಗೆ ಬೇಕಿತ್ತೇ ಎಂಬ ಹಿಂಜರಿಕೆಯೂ ನನ್ನನ್ನು ಕಾಡಲಿಲ್ಲ. ತಪ್ಪು ಇಬ್ಬರಲ್ಲೂ ಇತ್ತಲ್ಲ. ಇವರ ಬದುಕಿಗೆ ನಾನೇ ಕೊನೆಯ ಹೆಣ್ಣು ಅಂತ ಬೇರೆ ಹೇಳಿದ್ದಾರೆ.... ರಾತ್ರಿಯೆಲ್ಲಾ 'ನೀ ಕೊಡೆ ನಾ ಬಿಡೆ' ಹೊಯ್ದಾಟದಲ್ಲಿ ತೊಡೆ ಬಿಗು ಹಿಡಿದು ಮಲಗತೊಡಗಿದೆ.

ಒಂದು ವಾರ ಕಳೆಯುವುದರೊಳಗೆ ನನ್ನವರು ನಲುಗಿ ತನ್ನೊಳಗಿನ ಸತ್ವ ಕಳೆದುಕೊಂಡವರಂತೆ ಕಂಡುಬಂದರು. ಆದರೂ ಮುಖ ತಿರುಗಿಸಿಕೊಂಡೇ ನಡೆಯುತ್ತಿದ್ದರು. ಹಲ್ಲು ಕಚ್ಚಿಕೊಂಡು ಮನಸ್ಸನ್ನು ಹಿಡಿತಕ್ಕೆ ತಂದುಕೊಳ್ಳ ಬೇಕೆಂದಾಗೆಲ್ಲ ಸೋಲುತ್ತಿರುವ ಅನುಭವವಾಯಿತು. ಕಾಮನನ್ನು ಹತ್ತಿಕ್ಕಿದಷ್ಟು ನನ್ನ ದೈಹಿಕ ತುರ್ತು ಬಿಡುಗಡೆಗಾಗಿ ಹಂಬಲಿಸ ತೊಡಗಿತ್ತು. ಬಿಗಿ ಸಡಿಲಿಸಿ ತೆವಳಲು ತಯಾರಾದಾಗ ಇವರಿಗಿಷ್ಟವಾದ ತಿಂಡಿ ಮಾಡಿ ಕೋಪ ಮರೆ ಮಾಡಿದ್ದೆ.

'ಇಷ್ಟು ದಿನ ನನ್ನನ್ನು ಸತಾಯಿಸಿದೆ. ಇರಲಿ ಇಂದಿನಿಂದ ನನಗೆ ಹೆಂಡತಿ ಇಲ್ಲ ಅಂದುಕೊಳ್ಳುತ್ತೇನೆ. ಆದರೆ ನನಗೆ ಸುರತೆ ಬೇಕು; ಅದಕ್ಕಾಗಿ ಬೇರೆ ಹೆಣ್ಣನ್ನು ಅರಸಿ ಹೋಗುವವ ನಾನಲ್ಲ...'

ನಿನ್ನಲ್ಲಿ ಭ್ರಮನಿರಸನವೆಂಬುದೇ ಇಲ್ಲ. ಬದಲಾಗಿ ಒಬ್ಬ ವೇಶ್ಯೆ ಇರುವುದು ಖಚಿತವಾಯ್ತು. ನಿನ್ನನ್ನು ಒಬ್ಬ ಸೂಳೆ ಎಂದು ಸ್ವೀಕರಿಸುತ್ತಿದ್ದೇನೆ; ಎಂದು ಉದ್ವೇಗವಿಲ್ಲದೆ ಹೇಳಿದರು.

ನಾನು ಮೌನದಲ್ಲಿ ಹೋಳಾಗಿದ್ದೆ.

ನನ್ನವರು ರಾತ್ರಿ ಊಟವಾದ ತಕ್ಷಣ ತಮ್ಮ ಓದಿನ ರೂಮನ್ನು ಸೇರಿಕೊಂಡು ಗುಟ್ಟಾಗಿ ಅಶ್ಲೀಲ ವೀಡಿಯೊ, ನೀಲಿ ಚಿತ್ರಗಳನ್ನೂ ನೋಡಿದ ನಂತರವೇ ನನ್ನನ್ನು ಸೇರಲು ಬರುತ್ತಿದ್ದದ್ದು ತಡವಾಗಿ ನನ್ನ ಗಮನಕ್ಕೆ ಬಂದಿತು. ಬಹುಶಃ ಇವರಿಗೆ ಮುಂಚಿನಿಂದಲೂ ಆರಂಭಿಕ ಐಬು ಇತ್ತೇ ಎಂಬ ಸಂಶಯ ಕಾಡತೊಡಗಿತು.

ಮೊನ್ನೆಯಿಂದ ಹೊಸ ಹೊಸ ವಿಕೃತಿಗಳನ್ನು ಪ್ರಯೋಗಿಸತೊಡಗಿದ್ದು ನನ್ನಲ್ಲಿ ಸಾಕಷ್ಟು ಭಾವತೃಪ್ತಿ ತರದಿದ್ದರೂ ವೈವಿಧ್ಯಮಯ ನಡುವೆ ಸರಿದೂಗಿಸಿಕೊಂಡಿದ್ದೆ. ದಿನ ಕಳೆದಂತೆಲ್ಲ ಗಂಡನ ವಿಕೃತ ಕಾಮವು ತಡೆದುಕೊಳ್ಳಲಾಗದಷ್ಟು ವಿಕೋಪಕ್ಕೆ ತಿರುಗಿದಾಗ ಇವರ ಬದ್ಧತೆಯು ಕೇವಲ ತೋರಿಕೆಗಾಗಿ ಇತ್ತೇ ಅನಿಸಿತು. ಆದರೆ ಅದೊಂದನ್ನು ಬಿಟ್ಟರೆ ಬೇರೆಲ್ಲಾ ನಡೆಯಲ್ಲೂ ಮೊದಲಿನ ಸಭ್ಯತೆಯೇ ಇತ್ತು. ಹಾಗಾದರೆ ನನ್ನ ಹೊರಸಂಬಂಧ ಮತ್ತು ನಂತರದ ಹಠದಿಂದಾಗಿ....

ಒಂದು ದಿನ ರೂಮಿನಿಂದ ಹಾಸಿಗೆಗೆ ಬಂದವರೇ 'ನಿನ್ನಿಂದ ನನಗೆ ಸಾಕಷ್ಟು ತೃಪ್ತಿ ಸಿಗುತ್ತಿಲ್ಲ. ನಿನ್ನನ್ನು ಹಿಮ್ಮುಖ ಸೇರಬೇಕೆಂಬ ಬಯಕೆ ಮೂಡುತ್ತಿದೆ. ಸಹಕರಿಸುವೆಯಾ?' ಎಂದು ಕೇಳಿಬಿಟ್ಟರು.

ತಕ್ಷಣ ನನ್ನ ನರನಾಡಿಗಳೆಲ್ಲ ಮುರುಟಿಕೊಂಡಂತೆನಿಸಿತು. ಹೆಣ್ಣೆಂಬ ಹೆಣ್ಣಿನ ಸ್ವಾಭಿಮಾನವನ್ನು ಕೆಣಕುವ ಮಾತದು. ಮಿಲನದಲ್ಲಿ ನೆಲೆ ಕಂಡುಕೊಳ್ಳಲಾಗದ ಅತಿ ಕಾಮುಕ ಹೆಂಡತಿಯನ್ನು ಮಥಿಸಬೇಕಾದರೆ ಗಂಡನಿಗಿರುವ ಏಕೈಕ ಮಾರ್ಗ ವೆಂದರೆ ಅನೈಸರ್ಗಿಕವಾಗಿ ಆಕೆಯೊಂದಿಗೆ ಗುದ ಸಂಭೋಗ ನಡೆಸುವುದು ಎಂದು ಕೇಳಿದ್ದೆ.

ನನ್ನವರನ್ನು –ಯಾವಾಗಲೂ ಕುಳಿತು ಉಚ್ಚೆ ಹೊಯ್ಯುತ್ತಿದ್ದದನ್ನೂ ಸೇರಿಸಿ ಯಾವುದಕ್ಕೂ ಆಕ್ಷೇಪಿಸದಿದ್ದ ನನಗೆ ನನ್ನ ಏಕತಾನತೆಗೆ ಭಂಗವುಂಟಾಗಿ ಇವರ ಬಗೆಗೆ ಇದ್ದ ವಿಶ್ವಾಸವೆಲ್ಲ ಜರ್‍ರನೆ ಜಾರಿಕೊಂಡಿತು. ಬೇಗುದಿಯಲ್ಲಿ ಎದ್ದು ಹೊರ ಕೋಣೆಗೆ ಹೋಗಿ ಚಿಲಕ ಹಾಕಿ ಮಲಗಿಕೊಂಡೆ. ಅಪ್ರಿಯ ಸತ್ಯವೊಂದು ವರ್ತಮಾನವನ್ನು ಇಷ್ಟೊಂದು ಕ್ರೂರವಾಗಿಸಲು ಸಾಧ್ಯವೆ? ಒಳಗೊಳಗೇ ಬೇಯುತ್ತ ರಾತ್ರಿಯಿಡಿ ಹೊರಳಾಡಿದೆ.

ಈಗೀಗ ತವರಿನವರೂ ದೂರಾಗಿ ಅವರೊಪ್ಪಿ ಮಾಡಿದ ವಿವಾಹದ ಬದ್ಧತೆ ಗಳು ಪ್ರಶ್ನಾರ್ಥಕವಾಗಿ ನಿಂತು ಗಂಡನೊಂದಿಗಿನ ಲೈಂಗಿಕ ಆಸಕ್ತಿ ಉಡುಗ ತೊಡಗಿತ್ತು. ಆದರೂ ಗಂಡನೆಲ್ಲಿ ಬೇರೊಬ್ಬಳ ಕನಸಿನಲ್ಲಿ ಹೋದಾರೋ ಎಂಬ ಭುಗಿಲು ಕಾಡುವುದಿತ್ತು. ನಟ್ಟಿರುಗಳಲ್ಲಿ ನನ್ನೊಳಗಿನ ಬತ್ತದ ಕಾಯವು ಕೆರಳಿ ಬಿಕೋ ಎನ್ನುತ ಎದೆಯೊಂದಿಗೆ ಒಂಟಿತನದಿಂದ ನರಳುವುದಾಯಿತು.

ಹಾಗಾದರೆ ನಮ್ಮಲ್ಲಿರುವ ಅತಿಲೈಂಗಿಕ ಸಂಕಟಗಳೇ ವಿಕೃತಿಯಾಗಿ ಕಾಡುತ್ತವೆಯೇ? ಹಾಗೆ ನೋಡಿದರೆ ಪತಿವ್ರತೆ/ ವ್ಯಭಿಚಾರಿಣಿ ಭಾವಗಳೇ ಸಂಕೀರ್ಣ. ಕಾಮಸೂತ್ರವನ್ನು ಜಗತ್ತಿಗೆ ಪರಿಚಯಿಸಿದ ನಾಡಿನಲ್ಲಿ ನೈತಿಕತೆ ಯೊಂದು ಮೃಗಗಳಂತೆ. ಬಾಳಲಾಗದೆಂದು ನಾವೇ ಹಾಕಿಕೊಂಡ ನಂಬಿಕೆಯೇ ಚೌಕಟ್ಟಷ್ಟೇ. ಪತಿವ್ರತೆ ಅಥವಾ ಏಕಪತ್ನಿಯ ಪ್ರೀತಿಯಲ್ಲೂ ವ್ಯಭಿಚಾರಿಣಿ ಭಾವಗಳಿಲ್ಲದಿದ್ದರೆ ಅದೊಂದು ಪರಿಪೂರ್ಣ ದಾಂಪತ್ಯವೆನಿಸಿಕೊಳ್ಳುವುದಿಲ್ಲ. ಅದರ ಮುಂದುವರಿದ ಭಾಗವಾಗಿಯೇ.....

ಕಾಮವು ಹಾಸಿಗೆ ಬಿಟ್ಟು ಈಚೆಗೆ ಬಂದಿರುವುದು.

ಬೇಕಾದದ್ದು ಸಿಕ್ಕದ, ಸಿಕ್ಕಿದ್ದು ಬೇಕಾಗದ ಗೊಂದಲದಲ್ಲಿ ಲೈಂಗಿಕ ತಜ್ಞರನ್ನು ಕಾಣುವುದು ಸೂಕ್ತ ಅನ್ನಿಸಿ, ಒಬ್ಬಳೇ ಹಿರಿಯ ತಜ್ಞರೊಬ್ಬರನ್ನು ಕಾಣಲು ಹೋದೆ.

ನನ್ನ ಸರದಿ ಬಂದಾಗ ಒಳಹೋಗಿ ಕುಳಿತೆ.

ನನ್ನ ಮದುವೆಗೂ ಮೊದಲಿನ ಪುರುಷ ಸಂಬಂಧದ ಉತ್ಕಟತೆ, ಅದರಿಂದ ಹುಟ್ಟದ ಮಗು, ಈಗಿನ ಲೈಂಗಿಕ ಹಪಾಹಪಿ ಮತ್ತು ಅತೃಪ್ತಿ, ಹಾಗೆಯೇ ಅನೈಸರ್ಗಿಕ ಕಾಮಕೇಳಿಗೆ ಒತ್ತಾಯಿಸುವ ಗಂಡ ಇವೆಲ್ಲವನ್ನ ಮನಬಿಚ್ಚಿ ಹೇಳಿದೆ.

ಅವರು ಕೂಲಂಕಷವಾಗಿ ಪರಿಶೀಲಿಸಿ 'ನೋಡಮ್ಮ, ಹೆಣ್ಣಿನಲ್ಲಿಯ ಪಿಟ್ಯುಟರಿ ಗ್ರಂಥಿಯು ರಸದೂತಗಳನ್ನು ಸ್ರವಿಸಿದಾಗ ಅದು ಅಂಡಾಶಯಗಳನ್ನು ಪ್ರಚೋದಿಸಿ, ಲೈಂಗಿಕ ಹಾರ್ಮೋನುಗಳಾದ ಈಸ್ಟ್ರೋಜನ್ ಮತ್ತು